

## ಸಾವಿನ ಸಾರ್ಥಕತೆ

ಕೆ.ಎನ್. ಗಣೇಶಯ್ಯ ಅವರ 'ಸಾವಿನ ಸಾರ್ಥಕತೆ' (ಮೇ 20) ಚಿಂತನಕ್ಕೆ ಪ್ರಚೋದನೆ ನೀಡುವ ಲೇಖನ. ಐದು ಸಾರಿ ಓದಿದೆ. ಇದು ಜತನವಾಗಿ ಸಂಗ್ರಹ ಮಾಡುವಂತಹ ಬರಹ. ಪ್ರಸ್ತುತಕ್ಕೆ ಕನ್ನಡಿಯಾಗಿದೆ.

—ಎನ್. ಶ್ರೀಕಂಠ ಬೆಂಗಳೂರು, ಬಿ. ಶೋಭಾ ಅರಸ ಕುಂದಾಪುರ

ಲೇಖನ ಬದುಕಿನ ಮತ್ತೊಂದು ಆಯಾಮವನ್ನು ನನಗೆ ಪರಿಚಯಿಸಿತು. ಲೇಖಕರು, ಜೀವ ಮತ್ತು ಜೀವನದ ಕುರಿತು ವೈಜ್ಞಾನಿಕ ದೃಷ್ಟಿಕೋನವನ್ನು ಮೂಡಿಸಿದ್ದಾರೆ.

—ಭೋಜರಾಜ ಜೆ., ರಾಣೆಬೆನ್ನೂರು

ಪುನರ್ ಅಭಿವೃದ್ಧಿಯ ನಂತರ ಸಾವಿಗೆ ಶರಣಾಗುವ ಹಲವಾರು ಜೀವಿಗಳನ್ನು ನೋಡಿದಾಗ, ಪುನರ್ ಅಭಿವೃದ್ಧಿಯ ನಂತರವೂ ಮುಂದಿನ ಪೀಳಿಗೆಯ ಏಳಿಗೆಗಾಗಿ ತುಡಿಯುವ, ಅದಕ್ಕಾಗಿ ಬದುಕಬೇಕೆಂಬ ಅದಮ್ಯ ಆಸೆಯನ್ನು ಹೊಂದಿರುವ ಮಾನವ ಜೀವನ ಎಷ್ಟೊಂದು ಶ್ರೇಷ್ಠ ಎಂಬ ಮನವರಿಕೆ ಆಗುತ್ತದೆ. 'ಸಾವಿನ ಅಂಚಿನಲ್ಲಿರುವರಿಗೂ ಏಕೆ ಬದುಕಬೇಕೆಂಬ ಆಸೆ ಹೆಚ್ಚಾಗಿರುತ್ತದೆ' ಎಂಬ ಪ್ರಶ್ನೆಗೆ ಉತ್ತರ ಸಿಕ್ಕಂತಾಯಿತು.

—ಅಪೂರ್ವ ಕೆ.ಆರ್., ವಿದ್ಯಾರಣ್ಯಪುರ

## ಬಸವ ಮಹಾಮಾರ್ಗ

ವಿ. ಆರ್. ಅವರ 'ಬಸವ ಮಹಾಮಾರ್ಗ' (ಮೇ 20) ಲೇಖನ ಪ್ರಸ್ತುತವಾಗಿದೆ. ಆದರೆ ಅವರು 'ಕಾಯಕವೇ ಕೈಲಾಸ' ಎಂದು ಬಸವಣ್ಣನವರು ಹೇಳಿದ್ದಾಗಿ ಬರೆದಿರುವುದು ಸರಿಯಲ್ಲ. ಕಾಯಕವೇ ಕೈಲಾಸ ಎಂದು ಮೊದಲು ತನ್ನ ವಚನದಲ್ಲಿ ಹೇಳಿದ್ದು ಆಯ್ದಕ್ಕಿ ಮಾರಯ್ಯ. ಕಾಯವೇ ಕೈಲಾಸ ಎಂದು ಹೇಳಿದ್ದು ಬಸವಣ್ಣ. ಬಸವಣ್ಣನವರು 'ದೇಹವೇ ದೇಗುಲ' ಎಂಬ ಹೊಸ ಪರಿಕಲ್ಪನೆಯ ವಚನವನ್ನು ಬರೆದಿರುವುದನ್ನು ಇಲ್ಲಿ ನೆನೆಯಬಹುದು. ಆದರೆ 'ಕಾಯಕವೇ ಕೈಲಾಸ' ಎಂಬ ಪರಿಕಲ್ಪನೆ ಆಯ್ದಕ್ಕಿ ಮಾರಯ್ಯ ಅವರದು. ವಚನ ಚಳವಳಿಯಲ್ಲಿ ಈ ಎರಡು ಪರಿಕಲ್ಪನೆಗಳಿಗೂ ಮಹತ್ವವಿದೆ. ಬಸವಣ್ಣನವರ ಕಾಯವೇ ಕೈಲಾಸವೆಂಬ ಕಲ್ಪನೆಯು ಸ್ಥಾವರ ದೇಗುಲ ವಿರೋಧಿಯಾಗಿ ಇಂದಿಗೂ ಮಹತ್ವವುಳ್ಳ ಪ್ರಗತಿಪರ ಪರಿಕಲ್ಪನೆಯಾಗಿದೆ.

—ಬರಗೂರು ರಾಮಚಂದ್ರಪ್ಪ, ಡಾ. ಎಚ್. ಚಂದ್ರಶೇಖರ್

'ದಯೆಮಾನವೀಯತೆಯ ಬಸವ ಮಹಾಮಾರ್ಗ' ಲೇಖನ ಬಹಳ ಚೆನ್ನಾಗಿ ಮೂಡಿಬಂದಿದೆ. ಬಸವಣ್ಣನ ವಿಚಾರಗಳು ಅನುಭವಜನ್ಯವಾಗಿದ್ದವು ಎಂಬ ವಿಚಾರವು ಸತ್ಯ.

—ದೇವಾನಂದ ಆರ್. ತರೀಕೆರೆ

## ಸತ್ಯಜಿತ್ ರೇ ನೆನಪು

ಮೇ 20ರ ಸಂಚಿಕೆಯಲ್ಲಿ ವಿಶಾಖ ಎನ್ ಬರೆದಿರುವ ಸತ್ಯಜಿತ್ ರೇ ನೆನಪಿನ ಬರಹ ಚೆನ್ನಾಗಿದೆ. ಮಹೇಶ್ ಮಂಜ್ರೇಕರ್ ಹೇಳಿದ್ದರು: 'ಪಥೇರ್ ಪಾಂಚಾಲಿ'ಯನ್ನು ಒಮ್ಮೆ ಅನುಭವಿಸಿದ ನಂತರ ಈ ಚಿತ್ರವನ್ನು ಮತ್ತೆ ನೋಡಿ ಆ ಮೊದಲಿನ ಅನುಭವವನ್ನು ತೆಳುವಾಗಿಸಬಯಸುವುದಿಲ್ಲ. ಅವರ ಬೇರಾವ ಚಿತ್ರವೂ ನನಗೆ ಬೇಡ, ಇದೊಂದೇ ಸಾಕು'. ಯಾರು ಏನೇ ಹೇಳಿರಲಿ, ಸತ್ಯಜಿತ್ ರೇ (ರಾಯ್) ನಮಗೂ ಬಡತನವನ್ನೇ ತೋರಿದರು, ನಮ್ಮನ್ನು ಮಹಾ ಶ್ರೀಮಂತರನ್ನಾಗಿಸಿದರು. 'ಪಥೇರ್ ಪಾಂಚಾಲಿ' ನೋಡಿರದಿದ್ದರೆ ನಾವು ಬಡವರಾಗಿಯೇ ಉಳಿದುಬಿಡುತ್ತಿದ್ದೆವು.

—ಎ. ಜಾನಕಿರಾಮ್, ಬೆಂಗಳೂರು

## ವಿಜ್ಞಾನ ಸಂವಹನಕ್ಕೆ ನಿಷೇಧ ಪರ್ವ

ಶ್ರೀಗುರು ಅವರ 'ವಿಜ್ಞಾನ ಸಂವಹನಕ್ಕೀಗ ನಿಷೇಧ ಪರ್ವ' (20 ಮೇ) ಉಪಯುಕ್ತ ಮಾಹಿತಿಯುಳ್ಳ ಲೇಖನ. ವಿಜ್ಞಾನವನ್ನು ಜನಸಾಮಾನ್ಯರ ಬಳಿಗೆ ಕೊಂಡೊಯ್ಯುತ್ತಿರಬೇಕು ಎಂಬ ಪ್ರಯತ್ನಗಳು ನಡೆಯುತ್ತಿವೆಯಾದರೂ ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಾಗಿಲ್ಲ. ಜಾಗತಿಕ ಮಟ್ಟದಲ್ಲಿ ವಿಜ್ಞಾನ, ಸಂಶೋಧಕರಿಗೆ ಅಂತರರಾಷ್ಟ್ರೀಯ ಜರ್ನಲ್‌ಗಳ ಲೇಖನಗಳು ಸುಲಭವಾಗಿ ಸಿಗದೇ ವಿಜ್ಞಾನ ಸಂವಹನಕ್ಕೆ ಕುತ್ತು ಬಂದಿರುವುದು ಆತಂಕಕಾರಿಯಾದದ್ದು.

—ಡಾ. ಜಿ ಬೈರೇಗೌಡ, ಬೆಂಗಳೂರು

## ಬಂದೇ ಬರತಾವ ಕಾಲ...

ಡಾ. ಲಕ್ಷ್ಮಣ ವಿ.ಎ. ಅವರ 'ಬಂದೇ ಬರತಾವ ಕಾಲ' (ಮೇ 20), ಏನೊಂದೂ ಆಗದ ಏನೆಲ್ಲಾ ಆಗಿಬಿಡುವ ಸಾಂದರ್ಭಿಕ ಬರಹ.

—ಕೆ. ಪುರುಷೋತ್ತಮ ರೆಡ್ಡಿ, ಪಾವಗಡ

## ಕೊರೊನಾ ಪಿಕ್ಚರಲ್ಲಿ ಹೀರೊಗಳೇ ಇಲ್ಲ!

ಪದ್ಮನಾಭ ಭಟ್‌ರ 'ಕೊರೊನಾ ಪಿಕ್ಚರಲ್ಲಿ ಹೀರೋಗಳೇ ಇಲ್ಲ' (ಮೇ 20) ಲೇಖನ ಚೆನ್ನಾಗಿದೆ. ಸಿನಿಮಾ ನಟರ ನಿಜವಾದ (ಕನ್ನಡ) ಬಣ್ಣ ಏನೆಂದು ತಿಳಿದಿದೆ. ನಮ್ಮ ಕನ್ನಡದ ಬಹುಭಾಷಾ ನಟರೊಬ್ಬರು ಸಲ್ಮಾನ್ ಖಾನ್ ಸ್ನೇಹಗಳಿಸಿದ್ದೇ ಜೀವನದ ದೊಡ್ಡ ಸಾಧನೆ ಎಂಬರ್ಥದಲ್ಲಿ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

—ಶೈಲಜಾ ಜೋಶಿ, ಗದಗ

## ಉತ್ತಮ ಪ್ರಬಂಧ

'ಒಲೆ ಮಹಾತ್ಮೆ' (ಮೇ 20, ಲೇ: ಗೀತಾ ಪಿ.ಎಸ್.) ಪ್ರಬಂಧ ಮೆಚ್ಚುಗೆಯಾಯಿತು. ನಾನು ಸಣ್ಣವನಿದ್ದಾಗ ಮೂಡಬಿದ್ರೆಯ ಅಜ್ಜಿಯ ಮನೆಯಲ್ಲಿ ಒಲೆಯಲ್ಲಿ ಮಾಡಿದ ಅಡುಗೆಯ ರುಚಿ ಈ ಲೇಖನದಷ್ಟೇ ರುಚಿಯಾಗುತ್ತಿತ್ತು. ಗಂಜಿ ಊಟಕ್ಕೆ ಮತ್ತು ತಿಂಡಿಗೆ 10–12 ಬಾಯಿಗಳು ಇರುತ್ತಿದ್ದವು. ಅವರು ಅಷ್ಟೊತ್ತಿಗೆ ಎದ್ದು ಜಾನುವಾರಗಳಿಗೆ ಆರೈಕೆ ಮಾಡಿ ಹಾಲು ಕರೆದು ಅಡುಗೆ ಮಾಡುತ್ತಿದ್ದರು. ಕಟ್ಟಿಗೆ ಸಮಸ್ಯೆ ಪ್ರಬಂಧದಲ್ಲಿಯೇ ಇದೆ. ಗಾಳಿ ಊದುವ ತುತ್ತೂರಿಯಂತಹ ಸೊಂಕ್ಲಯಿ (ತುಳುವಿನಲ್ಲಿ) ಊದುವ ದೃಶ್ಯ ಮತ್ತೆ ಬಿಸಿನೀರಿನ ಹಂಡೆಗೆ ಹಸಿಕಟ್ಟಿಗೆಗೆ ಗಾಳಿ ಹಾಕಿ ಊದುವ ದೃಶ್ಯ, ನೆನಪಾಯಿತು. ಅಂದಿನ ದಿನಗಳಲ್ಲಿ ಈ ಕರ್ಮಗಳು ಅನಿವಾರ್ಯವಾಗಿದ್ದುದರಿಂದ ಅವರು ಇಂದಿನ ತಲೆಮಾರಿನ ಸುಖಿ ಮಹಿಳೆಗೆ ಶಾಪ ಹಾಕುವಂತಿಲ್ಲ.

—ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ

'ಒಲೆ ಮಹಾತ್ಮೆ' ಓದಿದ ನಮಗೆ 40 ವರ್ಷದ ಹಿಂದಿನ ನೆನಪು ಮರುಕಳಿಸಿತು. ಅಂದು ನನ್ನಮ್ಮ ಮಣ್ಣನ್ನು ಶೇಖರಣೆ ಮಾಡಿಟ್ಟುಕೊಂಡು ಒಲೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಬೆಂಕಿಯ ಕಾವು ಬೇಗ ತಟ್ಟಬೇಕು ಹಾಗೆ ಗಾಳಿಯಾಡುವ ಜಾಗದಲ್ಲಿ ಒಲೆ ಇಡುತ್ತಿದ್ದರು. ಕಟ್ಟಿಗೆಯನ್ನು ಹಿಂದಿನ ದಿನ ಸಿದ್ಧ ಮಾಡಿಕೊಳ್ಳುತ್ತಿದ್ದರು. ಪಾತ್ರೆ ಮಸಿಯಾಗಬಾರದೆಂದು ರಾಗಿ ಹಿಟ್ಟು ಕಲಸಿ ಪಾತ್ರೆಯ ತಳಕ್ಕೆ ಸವರುತ್ತಿದ್ದರು. ಒಲೆಯಲ್ಲಿ ಮಾಡಿದ ಅಡುಗೆ ತುಂಬಾ ರುಚಿಯಾಗಿರುತ್ತಿತ್ತು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in